ಬಿಜೆಪಿ–ಕರ್ನಾಟಕ

# ರಾಜ್ಯ ಕಾರ್ಯಕಾರಿಣಿ ಸಭೆ

**16, 17 ಏಪ್ರಿಲ್ 2022 | ಹೊಸಪೇಟೆ, ವಿಜಯನಗರ**

## ನಿರ್ಣಯ – 1

### ಸರ್ವಸ್ಪರ್ಷಿ ಅಭಿವೃದ್ಧಿ ಸರ್ಕಾರವನ್ನು ಮೆಚ್ಚುವ ಬದಲಿಗೆ ಬರಿ ಟೀಕೆಗಳನ್ನೆ ಮಾಡುವ ಆತ್ಮವಂಚಕ ವಿಪಕ್ಷಗಳ ದೋರಣೆಗೆ ಖಂಡನೆ.

1. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಪಕ್ಷದ ಜವಾಬ್ದಾರಿಯು ಅತ್ಯಂತ ಪ್ರಮುಖವೆಂಬುದನ್ನು ಕಾಂಗ್ರೆಸ್ ಪಕ್ಷವು ಮರೆತು ಸೈದ್ಧಾಂತಿಕ ದಿವಾಳಿತನವನ್ನು ಪ್ರದರ್ಶಿಸುತ್ತಿದೆ. ಕಲಾಪಗಳಿಗೆ ಅಡ್ಡಿ, ತುಷ್ಟೀಕರಣ, ಪಾದಯಾತ್ರೆಯಂತಹ ಅಣಕು ಪ್ರದರ್ಶನ ಹಾಗೂ ಸಾವಿನ ಪ್ರಕರಣಗಳಲ್ಲಿ ರಾಜಕೀಯವನ್ನು ಬೆರೆಸುವುದರೊಂದಿಗೆ ಸಮರ್ಥ ಪ್ರತಿಪಕ್ಷವಾಗಿ ಕಾರ್ಯನಿರ್ವಹಿಸುವಲ್ಲಿ ಸಂಪೂರ್ಣ ವಿಫಲವಾಗಿರುವ ಕಾಂಗ್ರೆಸ್ ಧೋರಣೆಯನ್ನು ವಿಜಯನಗರದಲ್ಲಿ ನಡೆಯುತ್ತಿರುವ **ರಾಜ್ಯ ಬಿಜೆಪಿ ಕಾರ್ಯಕಾರಿಣಿಯು** ತೀವ್ರವಾಗಿ ಖಂಡಿಸುತ್ತದೆ.
2. ಕೋವಿಡ್ ಸಾಂಕ್ರಾಮಿಕ ಸವಾಲುಗಳ ಮಧ್ಯೆಯೂ ರೈತ ಮಕ್ಕಳಿಗೆ ನೀಡಲಾಗುತ್ತಿರುವ ವಿದ್ಯಾನಿಧಿ ಯೋಜನೆಯನ್ನು ಮೀನುಗಾರರು ಹಾಗೂ ನೇಕಾರರ ಮಕ್ಕಳಿಗೂ ವಿಸ್ತರಿಸಿರುವುದು ದೇಶದಲ್ಲಿಯೇ ಪ್ರಥಮವಾಗಿದೆ. ಇದರಿಂದ 38 ಲಕ್ಷ ಮಕ್ಕಳು ಸಹಾಯಧನವನ್ನು ಪಡೆಯುತ್ತಾರೆ. **100 ಹಾಸ್ಟೇಲ್‌ಗಳ ನಿರ್ಮಾಣ, 5 ವಿನೂತನ ಮಾದರಿಯ ವಿಶ್ವವಿದ್ಯಾಲಯಗಳ ನಿರ್ಮಾಣ. ಟೆಕ್ಸ್‌ಟೈಲ್ ಪಾರ್ಕ್‌ಗಳ** ಘೋಷಣೆಯೊಂದಿಗೆ ಮಂಡಿಸಿರುವ ಬಜೆಟ್ ಸರ್ವಸ್ಪರ್ಷಿಯಾಗಿರುತ್ತದೆ.
3. ಹಿಜಾಬ್‌ನಂತಹ ಪ್ರಕರಣವನ್ನು ಸಮರ್ಥವಾಗಿ ನಿರ್ವಹಿಸಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲಾಗಿದೆ. ಹಿಂದುಳಿದಿರುವ ಪ್ರದೇಶಗಳನ್ನು ಆದ್ಯತಾ ತಾಲೂಕುಗಳಾಗಿ ಘೋಷಣೆ, **ರೈತಶಕ್ತಿ ಯೋಜನೆ, ಯಶಸ್ವಿನಿ ಯೋಜನೆ, ನೇಕಾರ ಸಮ್ಮಾನ್ ಯೋಜನೆ, ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್** ಸ್ಥಾಪನೆ ಮುಂತಾದವುಗಳು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಲಿವೆ.
4. ಕರ್ನಾಟಕವು ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದ ಮೊದಲ ರಾಜ್ಯವಾಗಿದೆ. ದೇಶದ IIT ಮಾದರಿಯಲ್ಲಿ ರಾಜ್ಯದ ಏಳು ಇಂಜಿನೀಯರಿಂಗ್ ಕಾಲೇಜುಗಳನ್ನು **ಕರ್ನಾಟಕ ಇನ್ಸಿಟಿಟ್ಯುಟ್ ಆಫ್ ಟೆಕ್ನಾಲಜಿಯನ್ನಾ**ಗಿ **(KIT)** ಮೇಲ್ದರ್ಜೆಗೇರಿಸುತ್ತಿರುವುದು, **ನವಭಾರತಕ್ಕಾಗಿ–ನವಕರ್ನಾಟಕ** ಎಂಬ ಉದ್ಯೋಗ ಸೃಷ್ಠಿ ವಿಶೇಷ ಯೋಜನೆ, ಜನಸಾಮಾನ್ಯರ ಆರೋಗ್ಯಕ್ಕಾಗಿ **ನಮ್ಮ ಕ್ಲೀನಿಕ್** ಯೋಜನೆ. ಮಹಿಳಾ ಸಬಲೀಕರಣಕ್ಕಾಗಿ **ಅಸ್ಮಿತೆ** ಮುಂತಾದ ಯೋಜನೆಗಳಿಗಾಗಿ ವಿಜಯನಗರದ **ರಾಜ್ಯ ಬಿಜೆಪಿ ಕಾರ್ಯಕಾರಣಿ** ಸಭೆಯು ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತದೆ.
5. ನೆಚ್ಚಿನ ಪ್ರಧಾನಮಂತ್ರಿಗಳು ಕೇಂದ್ರ ಸರ್ಕಾರವು ಘೋಷಿಸುವ ಯೋಜನೆಗಳ ಅನುಷ್ಠಾನಕ್ಕಾಗಿ **'ಡಬಲ್ ಇಂಜಿನ್ ಸರ್ಕಾರ'** ಮುಖ್ಯವೆಂಬುದನ್ನು ಒತ್ತಿ ಹೇಳುತ್ತಾರೆ. ಕೇಂದ್ರ ಸರ್ಕಾರ ಸಹಭಾಗಿತ್ವದ ಹಲವಾರು ಯೋಜನೆಗಳು ಬಿಜೆಪಿಯೇತರ ರಾಜ್ಯಗಳಲ್ಲಿ ನಿರೀಕ್ಷಿತ ಗುರಿ ಸಾಧಿಸಿರುವುದಿಲ್ಲ. ಇದರ ನೇರ ಪರಿಣಾಮ ಜನಸಾಮಾನ್ಯರ ಮೇಲೆ ಉಂಟಾಗುತ್ತದೆ.

    - ಫೆಬ್ರವರಿ 2019 ರಂದು ಘನತೆವೆತ್ತ ಪ್ರಧಾನಮಂತ್ರಿಗಳು **'ಕಿಸಾನ್ ಸಮ್ಮಾನ್'** ಯೋಜನೆಯನ್ನು ಜಾರಿಗೊಳಿಸಿ ಎಲ್ಲ ರಾಜ್ಯ ಸರ್ಕಾರಗಳು ಫಲಾನುಭವಿಗಳ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಯಿತು. ಅಂದಿನ ಕರ್ನಾಟಕ ಸರ್ಕಾರವು ಕೇಂದ್ರಕ್ಕೆ ಕಳುಹಿಸಿದ ರೈತ ಫಲಾನುಭವಿಗಳ ಸಂಖ್ಯೆ ಕೇವಲ 17. ನಂತರದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಆಡಳಿತದ

ಸರ್ಕಾರವು ಸೂಕ್ತ ಕ್ರಮ ಕೈಗೊಂಡಿದ್ದರಿಂದ ಇಂದು 39 ಲಕ್ಷ ರೈತ ಕುಟುಂಬಗಳು ಪ್ರಯೋಜನವನ್ನು ಪಡೆಯುತ್ತಿವೆ.

- ಕಾಂಗ್ರೆಸ್ ಆಡಳಿತದ ರಾಜಸ್ಥಾನದಲ್ಲಿ 11.5 ಲಕ್ಷ ವ್ಯಾಕ್ಸಿನ್‌ಗಳನ್ನು ತಿಪ್ಪೆಗೆ ಎಸೆದಿರುವ ಬಗ್ಗೆ ವರದಿಯಾಗಿದ್ದು, ಜನಸಾಮಾನ್ಯರು ಇದರಿಂದ ವಂಚಿತರಾಗಿರುತ್ತಾರೆ. ಕರ್ನಾಟಕ ರಾಜ್ಯವು ಲಸಿಕಾಕರಣವನ್ನು ಸಂಪೂರ್ಣವಾಗಿ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಹಲವಾರು ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ 10 ರೈಲ್ವೆ ಯೋಜನೆಗಳು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ತೀವ್ರಗತಿಯ ಚಾಲನೆಯನ್ನು ಪಡೆದಿವೆ.

- ಕೇಂದ್ರ ಸರ್ಕಾರವು ಪ್ರತಿ ಲೀಟರ್ ಪೆಟ್ರೋಲ್‌ಗೆ 7 ರೂ. ಪ್ರತಿ ಲೀಟರ್ ಡಿಸೇಲ್‌ಗೆ 10 ರೂ.ನಂತೆ ಕಡಿತಗೊಳಿಸಿ ಆದಾಯ ಅನುಪಾತಕ್ಕನುಗುಣವಾಗಿ ಕಡಿತಗೊಳಿಸುವಂತೆ ಎಲ್ಲ ರಾಜ್ಯ ಸರ್ಕಾರಗಳಿಗೆ ಸೂಚನೆಯನ್ನು ನೀಡಿತ್ತು. ಬಿಜೆಪಿ ಆಡಳಿತದಲ್ಲಿರುವ ಎಲ್ಲ ರಾಜ್ಯಗಳು ಪೆಟ್ರೋಲ್ ಮತ್ತು ಡಿಸೇಲ್‌ಗಳ ಮೇಲೆ ಸರಾಸರಿ 7 ರೂ. ಹೆಚ್ಚುವರಿಯಾಗಿ ಕಡಿತಗಳಿಸಿವೆ. ಜಾಗತಿಕ ಮಟ್ಟದಲ್ಲಿ ಅಮೇರಿಕಾದಂತಹ ಮುಂದುವರೆದ ರಾಷ್ಟ್ರಗಳಲ್ಲಿಯೂ ಪೆಟ್ರೋಲ್ ದರ ಶೇ.50 ರಷ್ಟು ಹೆಚ್ಚಿದೆ. ಕಾಂಗ್ರೆಸ್ ಸರ್ಕಾರ ಇರುವ ರಾಜ್ಯಗಳಲ್ಲಿ ಯಾವುದೇ ಕಡಿತವನ್ನು ಮಾಡದೇ ಕಾಂಗ್ರೆಸ್ ಪಕ್ಷವು ಜನಹಿತ ಮರೆತಿರುವುದನ್ನು ಕಾರ್ಯಕಾರಣಿ ಸಭೆಯು ಖಂಡಿಸುತ್ತದೆ.

- ಕೇಂದ್ರ ಸರ್ಕಾರದ **ಮತ್ಸ್ಯ ಸಂಪದ ಯೋಜನೆ**ಯ ಸಹಭಾಗಿತ್ವದಲ್ಲಿ ಕರ್ನಾಟಕ ಸರ್ಕಾರವು **ಮತ್ಸ್ಯಸಿರಿ** ಯೋಜನೆಯನ್ನು 300 ಕಿ.ಮೀಗಳಷ್ಟು ಸಮುದ್ರದ ಒಳಭಾಗದಲ್ಲಿ ಕೈಗೊಳ್ಳಲು ಆರಂಭಿಸಿದೆ. ಧಾರ್ಮಿಕ ಸಂಸ್ಥೆಗಳಿಗೆ 119 ಕೋಟಿ ರೂ.ಗಳನ್ನು ನೀಡುವುದರ ಮೂಲಕ ಪರಂಪರೆಯನ್ನು ಸಂರಕ್ಷಿಸುತ್ತಿದೆ. ರಾಜ್ಯದಲ್ಲಿ ರಸ್ತೆ ನಿರ್ಮಾಣದ ಮಹಾಕ್ರಾಂತಿಯೇ ನಡೆದಿದೆ. **ಮನೆ ಮನೆಗೆ ಗಂಗೆ ಯೋಜನೆ** ಅತ್ಯಂತ ವೇಗವಾಗಿ ಸಾಗಿದ್ದು, ಈಗಾಗಲೇ 24 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಸಂಪರ್ಕವನ್ನೊದಗಿಸಲಾಗಿದೆ.

ಕಾಂಗ್ರೆಸ್ ಪಕ್ಷವು ಹಿಂದೂ ತರುಣರಾದ ಹರ್ಷ, ಚಂದ್ರು ಇವರ ಸಾವಿನಲ್ಲಿ ತುಷ್ಠೀಕರಣದ ನೀಚ ರಾಜಕೀಯವನ್ನು ಮಾಡುತ್ತಿದೆ. ಉಗ್ರವಾದಿಗಳಿಗೆ ಕುಮ್ಮಕ್ಕು ನೀಡುವಂತೆ ಎಸ್‌ಡಿಪಿಐ ಮತ್ತು ಪಿಎಫ್‌ಐ ಗಳ ಮೇಲೆ ದಾಖಲಾಗಿದ್ದ 150 ಕ್ಕೂ ಹೆಚ್ಚು ಪ್ರಕರಣಗಳನ್ನು ಕಾಂಗ್ರೆಸ್ ಆಡಳಿತದಲ್ಲಿದ್ದಾಗ ಕೈಬಿಟ್ಟಿದೆ. ರಾಷ್ಟ್ರಿಯತೆಗೆ ಪರಂಪರೆಗೆ ಅಪಾಯವನ್ನೊಡ್ಡುವ ಚಟುವಟಿಕೆಗಳಲ್ಲಿ ಕಾಂಗ್ರೆಸ್ ಪಕ್ಷವು ತೊಡಗುತ್ತಿದೆ.

ಕೇಂದ್ರ ಸಹಭಾಗಿತ್ವ ಯೋಜನೆಗಳ ಯಶಸ್ವಿ ಅನುಷ್ಠಾನದೊಂದಿಗೆ ಪಾರದರ್ಶಕ ಆಡಳಿತಕ್ಕೆ ಹೆಸರುವಾಸಿಯಾಗಿರುವ ಬೊಮ್ಮಾಯಿರವರ ನೇತೃತ್ವದ ಸರ್ಕಾರಕ್ಕೆ ಅಭಿನಂದನಾ ನಿರ್ಣಯವನ್ನು ಘೋಷಿಸುವುದರೊಂದಿಗೆ, ಪರಿಣಾಮಕಾರಿ ಪ್ರತಿಪಕ್ಷವಾಗಿ ಕರ್ತವ್ಯ ನಿರ್ವಹಿಸುವಲ್ಲಿ ವಿಫಲವಾಗಿರುವ ರಾಜಕೀಯ ಹಾಗೂ ನೈತಿಕ ಅಧಃಪತನಕ್ಕೆ ಕುಸಿದಿರುವ, ಅರಾಜಕತೆಯನ್ನು ಸೃಷ್ಠಿಸುತ್ತಿರುವ ಕಾಂಗ್ರೆಸ್ ಧೋರಣೆಯನ್ನು ವಿಜಯನಗರದಲ್ಲಿ ನಡೆಯುತ್ತಿರುವ **ಬಿಜೆಪಿ ಕಾರ್ಯಕಾರಿಣಿ ಸಭೆಯು** ಅತ್ಯಂತ ಉಗ್ರವಾಗಿ ಖಂಡಿಸಿ, ಜೀವ ರಕ್ಷಣಾ ಲಸಿಕೆಯನ್ನು ರಾಜಸ್ಥಾನದ ಕಾಂಗ್ರೆಸ್ ಸರ್ಕಾರವು ತಿಪ್ಪೆಗೇಸೆದಿರುವುದನ್ನು ಎಂದಿಗೂ ಮರೆಯದೇ ರಾಜ್ಯದ ಜನತೆ ಕಾಂಗ್ರೆಸ್ ಪಕ್ಷದ ಧೋರಣೆಯನ್ನು ತಿಪ್ಪೆಗೆಸೆಯಬೇಕೆಂದು ಆಗ್ರಹಿಸಿ **ಖಂಡನಾ ನಿರ್ಣಯವನ್ನು** ಮಂಡಿಸುತ್ತದೆ.

*****